# Queen Margrethe II of Denmark Welcomes Prime Minister

May 03, 2022

## ಡೆನ್ಮಾರ್ಕ್ ನ ಮಹಾರಾಣಿ ಘನತೆವೆತ್ತ 2ನೇ ( II ) ಮಾರ್ಗರೆಥೆ ಅವರು ಪ್ರಧಾನಮಂತ್ರಿಯವರನ್ನು ಸ್ವಾಗತಿಸಿದರು

ಕೋಪನ್ ಹೇಗನ್ ನಲ್ಲಿರುವ ತಮ್ಮ ಅಮಾಲಿಯನ್ ಬೋರ್ಗ್ ಅರಮನೆಗೆ ಇಂದು ಆಗಮಿಸಿದ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರನ್ನು ಡೆನ್ಮಾರ್ಕ್ ನ ಮಹಾರಾಣಿ ಘನತೆವೆತ್ತ 2ನೇ ( II ) ಮಾರ್ಗರೆಥೆ ಅವರು ಸ್ವಾಗತಿಸಿ ಬರಮಾಡಿಕೊಂಡರು.

ಡೆನ್ಮಾರ್ಕ್ ನ ಮಹಾರಾಣಿ ಘನತೆವೆತ್ತ 2ನೇ ( II ) ಮಾರ್ಗರೆಥೆ ಅವರು ಡೆನ್ಮಾರ್ಕ್ ನ ಸಿಂಹಾಸನಕ್ಕೆ ಏರಿದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಪ್ರಧಾನಮಂತ್ರಿಯವರು ಘನತೆವೆತ್ತ ಮಹಾರಾಣಿ ಅವರನ್ನು ಗೌರವಿಸಿದರು.

ಇತ್ತೀಚಿನ ವರ್ಷಗಳಲ್ಲಿ ಭಾರತ – ಡೆನ್ಮಾರ್ಕ್ ಸಂಬಂಧಗಳಲ್ಲಿ ಉತ್ತಮ ಸುಧಾರಣೆ, ಅದರಲ್ಲೂ ವಿಶೇಷವಾಗಿ ಹಸಿರು ಕಾರ್ಯತಂತ್ರದ ಸಹಭಾಗಿತ್ವದ ಕುರಿತು ಪ್ರಧಾನಮಂತ್ರಿ ಅವರು ಮಹಾರಾಣಿ ಅವರಿಗೆ ವಿವರಿಸಿದರು. ಸಾಮಾಜಿಕ ಕಾರ್ಯ– ಕಾರಣಗಳಿಗಾಗಿ ಡ್ಯಾನಿಶ್ ರಾಜಮನೆತನ ಹೊಂದಿರುವ ವಿಶೇಷ ಪಾತ್ರವನ್ನು ಪ್ರಧಾನಮಂತ್ರಿ ಅವರು ಈ ಸಂದರ್ಭದಲ್ಲಿ ಉಲ್ಲೇಖಿಸಿ ಶ್ಲಾಘಿಸಿದರು.

ತಮಗೆ ನೀಡಿದ ಆತ್ಮೀಯ ಸ್ವಾಗತ ಮತ್ತು ಆತಿಥ್ಯಕ್ಕಾಗಿ ಪ್ರಧಾನಮಂತ್ರಿಯವರು ಘನತೆವೆತ್ತ ಮಹಾರಾಣಿ ಅವರಿಗೆ ಧನ್ಯವಾದ ಹೇಳಿದರು.

**ಕೋಪನ್ ಹ್ಯಾಗನ್**

**ಮೇ 03, 2022**

DISCLAIMER: This is an approximate translation. The original is available in English on MEA's website and may be referred to as the official press release.